

بسم اللهِ الرّحمٰن الرّحيم

# ಜಲ್ಸ ಸಾಲಾನ ಯು.ಕೆ.ಗೆ ಸಂಬಂಧಪಟ್ಟು ಉಪದೇಶಗಳು

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರ‌ತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಯು.ಕೆ.ಯ ಇಸ್ಲಾಮಾಬಾದ್‌ನ **'ಮಸ್ಜಿದ್ ಮುಬಾರಕ್'** ನಿಂದ **24–07–2026** ರಂದು ನೀಡಿದ **ಜುಮುಅ ಖುತ್‌ಬದ ಸಾರಾಂಶ**)

أَشْهَدُ أَنْ لَّا إِلٰهَ إِلَّا اللّٰهُ وَحْدَهٗ لَا شَرِيْكَ لَهٗ وَأَشْهَدُ أَنَّ مُحَمَّدًا عَبْدُهٗ وَرَسُوْلُهٗ.

أَمَّا بَعْدُ فَأَعُوْذُ بِاللّٰهِ مِنَ الشَّيْطٰنِ الرَّجِيْمِ. بِسْمِ اللّٰهِ الرَّحْمٰنِ الرَّحِيْمِ.

اَلْحَمْدُ لِلّٰهِ رَبِّ الْعٰلَمِيْنَ. اَلرَّحْمٰنِ الرَّحِيْمِ. مٰلِكِ يَوْمِ الدِّيْنِ. إِيَّاكَ نَعْبُدُ وَإِيَّاكَ نَسْتَعِيْنُ.

اِهْدِنَا الصِّرَاطَ الْمُسْتَقِيْمَ. صِرَاطَ الَّذِيْنَ أَنْعَمْتَ عَلَيْهِمْ غَيْرِ الْمَغْضُوْبِ عَلَيْهِمْ وَلَا الضَّآلِّيْنَ.

*(ತಶಹ್ಹುದ್, ತಅವ್ವುಧ್, ಸೂರತುಲ್ ಫಾತಿಹ ಪಠಿಸಿದ ನಂತರ ಹಝ್ರ‌ತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್‌ರಿಹಿಲ್ ಅಝೀಝ್, ಹೀಗೆ ಹೇಳಿದರು:)*

ಅಲ್ಲಾಹನ ಕೃಪೆಯಿಂದ ಇಂದು ಬ್ರಿಟನ್‌ನ ಜಲ್ಸ ಸಾಲಾನ ಪ್ರಾರಂಭವಾಗುತ್ತಿದೆ. ದೇಶದ ಮೂಲೆ ಮೂಲೆಗಳಿಂದ ಮತ್ತು ಲೋಕದ ವಿವಿಧ ದೇಶಗಳಿಂದ ಅತಿಥಿಗಳು ಇದರಲ್ಲಿ ಪಾಲ್ಗೊಳ್ಳಲು ಬರುತ್ತಿದ್ದಾರೆ ಅಥವಾ ಬಂದಿದ್ದಾರೆ. ಇವರೆಲ್ಲರೂ ಹಝ್ರ‌ತ್ ಮಸೀಹ್ ಮೌಊದ್(ಅ)ರ ಅತಿಥಿಗಳಾಗಿದ್ದಾರೆ, ಅವರು ವಿಶೇಷ ಧಾರ್ಮಿಕ ಉದ್ದೇಶಕ್ಕಾಗಿ ಇಲ್ಲಿಗೆ ಬರುತ್ತಿದ್ದಾರೆ; ಹಾಗಾಗಿ ಈ ಅತಿಥಿಗಳ ಸತ್ಕಾರವು ವಿಶೇಷವಾದ ಗೌರವವನ್ನು ಹೊಂದಿರುತ್ತದೆ.

ಅಲ್ಲಾಹನ ಕೃಪೆಯಿಂದ ಲೋಕದ ಯಾವ ದೇಶದಲ್ಲಿ ಜಲ್ಸ ಸಾಲಾನಗಳು ನಡೆಯುತ್ತವೆಯೋ, ಅಲ್ಲಿನ ಮಕ್ಕಳು, ಯುವಕರು, ಪುರುಷರು ಮತ್ತು ಮಹಿಳೆಯರಿಗೆ 'ನಾವು ಜಲ್ಸದ ಅತಿಥಿಗಳ ಸೇವೆ ಮಾಡಬೇಕು' ಎಂಬ ಅರಿವು ಅವರಿಗೆ ಇರುತ್ತದೆ ಮತ್ತು ಅದಕ್ಕಾಗಿ ಎಲ್ಲರೂ ತಮ್ಮನ್ನು ಸ್ವತಃ ಸ್ವಯಂಸೇವಕರಾಗಿ ಸಮರ್ಪಿಸಿಕೊಳ್ಳುತ್ತಾರೆ. ಲೋಕದ ಜನರ ಆದ್ಯತೆಗಳು ಈಗ ಬದಲಾಗಿದ್ದರೂ, ಜಮಾಅತಿನ ನಿಷ್ಠಾವಂತರು ತಮ್ಮನ್ನು ತಾವು ಹಝ್ರ‌ತ್ ಮಸೀಹ್ ಮೌಊದ್(ಅ)ರ ಅತಿಥಿಗಳ ಸೇವೆಗಾಗಿ ಸಮರ್ಪಿಸಿಕೊಳ್ಳುತ್ತಿದ್ದಾರೆ.

ಅಲ್ಲಾಹನು ಅತಿಥಿಗಳ ಸೇವೆ ಮಾಡಲು ಮತ್ತು ಗೌರವಿಸಲು ಆಜ್ಞಾಪಿಸಿದ್ದಾನೆ ಎಂಬ ಅರಿವು ಈ ಜನರಿಗಿದೆ. ಹಝ್ರ‌ತ್ ಪೈಗಂಬರ್(ಸ) ತಮ್ಮ ಕಾರ್ಯ ಮತ್ತು ನುಡಿಯ ಮೂಲಕ ಈ ಉಪದೇಶವನ್ನು ನೀಡಿದ್ದಾರೆ. ಹಝ್ರ‌ತ್ ಮಸೀಹ್ ಮೌಊದ್(ಅ) ಈ ಕುರಿತು ಪದೇ ಪದೇ ಗಮನ ಸೆಳೆದಿದ್ದಾರೆ.

ಹಝ್ರ‌ತ್ ಪೈಗಂಬರ್(ಸ) ಹೀಗೆ ಹೇಳಿದರು: "ಅಲ್ಲಾಹನು ಮತ್ತು ಪುನರುತ್ಥಾನದ ದಿನದ ಮೇಲೆ ವಿಶ್ವಾಸವಿಡುವವರು ಅತಿಥಿಯ ನ್ಯಾಯಯುತ ಹಕ್ಕನ್ನು ಪೂರೈಸಬೇಕು." 'ನ್ಯಾಯಯುತ ಹಕ್ಕು ಎಂದರೆ ಏನು?' ಎಂದು ಕೇಳಲಾದಾಗ, ನಬಿ(ಸ) ಹೀಗೆ ಉತ್ತರಿಸಿದರು: "ಒಂದು ಹಗಲು ಮತ್ತು ರಾತ್ರಿಯ ಅತಿಥಿ ಸತ್ಕಾರ." ಮತ್ತೊಂದು ಕಡೆ "ಮೂರು ದಿನಗಳವರೆಗೆ ಅತಿಥಿಯ ಸತ್ಕಾರವನ್ನು ಮಾಡಿರಿ" ಎಂಬ ವರದಿಯೂ ಇದೆ.

ಇದು ವಿಶೇಷ ಅತಿಥಿಗಳಿಗಾಗಿ ಆಗಿದೆ, ಸಾಮಾನ್ಯವಾಗಿ ಜನರ ಮನೆಗೆ ಬರುವವರು ಕೆಲವು ದಿನಗಳಿಗಾಗಿ ಬರುತ್ತಾರೆ. ಸಾಮಾನ್ಯವಾಗಿ ಯಾವುದೇ ಅತಿಥಿ ಬರುವಾಗ ಅವರ ಅತಿಥಿ ಸತ್ಕಾರ ಮಾಡಬೇಕು, ಇದೇ ಮುಸಲ್ಮಾನರಿಗೆ ಇರುವ ಆಜ್ಞೆಯಾಗಿದೆ.

ಇತ್ತೀಚೆಗೆ ಜಲ್ಸದ ದಿನಗಳಲ್ಲಿ ಬರುತ್ತಿರುವ ಅತಿಥಿಗಳು, ಬಹುದೂರದ ಪ್ರಯಾಣ ಮಾಡಿ ಬರುತ್ತಿದ್ದಾರೆ, ಬೇರೆ ದೇಶಗಳಿಂದ ಬರುತ್ತಿದ್ದಾರೆ. ಇವರು ಮೂರು ದಿನಗಳಿಗಿಂತಲೂ ಹೆಚ್ಚು ಕಾಲ ತಂಗಬಹುದು. ಜಮಾಅತಿನ ವ್ಯವಸ್ಥೆಯ ಅಡಿಯಲ್ಲಿ ಇವರು ಎಷ್ಟು ದಿನ ತಂಗುತ್ತಾರೋ, ಅಂದರೆ ಮೂರರಿಂದ ನಾಲ್ಕು ವಾರಗಳವರೆಗೆ ಅಥವಾ ಎರಡರಿಂದ ಮೂರು ವಾರಗಳವರೆಗೆ, ಜಮಾಅತ್ ಅವರ ಅತಿಥಿ ಸತ್ಕಾರ ಮಾಡುತ್ತದೆ. ಅದಕ್ಕಾಗಿ, ಅವರ ಅತಿಥಿ ಸತ್ಕಾರ ಮಾಡಲು ಜಮಾಅತಿನ ಬಳಿ ಇಷ್ಟೊಂದು ದೊಡ್ಡ ಸಂಖ್ಯೆಯಲ್ಲಿ ಕಾರ್ಯಕರ್ತರು ಲಭ್ಯವಿರುವುದು ಅಲ್ಲಾಹನ ಬಹುದೊಡ್ಡ ಉಪಕಾರವಾಗಿದೆ, ಇವರು ವೇತನ ಪಡೆಯುವ ಕಾರ್ಯಕರ್ತರಲ್ಲ. ಮೂರರಿಂದ ನಾಲ್ಕು ವಾರಗಳವರೆಗೆ ಸ್ವಯಂಸೇವಕರು ಈ ಉದ್ದೇಶಕ್ಕಾಗಿ ತಮ್ಮನ್ನು ಸಮರ್ಪಿಸಿಕೊಳ್ಳುತ್ತಾರೆ. ಅಷ್ಟೇ ಅಲ್ಲ, ಇಲ್ಲಿ ಯು.ಕೆ.ಯಲ್ಲಿ ಅತಿಥಿ ಸತ್ಕಾರದ ವ್ಯವಸ್ಥೆಯು ಎಷ್ಟೊಂದು ವಿಸ್ತಾರವಾಗಿದೆಯೆಂದರೆ, ವರ್ಷವಿಡೀ ಹಝ್ರ‌ತ್ ಮಸೀಹ್ ಮೌಊದ್(ಅ)ರ ಲಂಗರ್ ನಡೆಯುತ್ತಿರುತ್ತದೆ. ಏಕೆಂದರೆ ಇಲ್ಲಿ ಖಿಲಾಫತ್ ಇದೆ. ಖಲೀಫತುಲ್ ಮಸೀಹ್‌ರ ಉಪಸ್ಥಿತಿ ಇರುವ ಕಾರಣ ಇಲ್ಲಿಗೆ ಜನರ ಆಗಮನ ಬಹಳ

ಹೆಚ್ಚಾಗಿದೆ. ಇದರಿಂದಾಗಿ ಅತಿಥಿ ಸತ್ಕಾರವನ್ನು ಸಹ ಮಾಡಬೇಕಾಗುತ್ತದೆ. ಅಲ್ಲಾಹನು ಇವರೆಲ್ಲರಿಗೂ ಉತ್ತಮ ಪ್ರತಿಫಲವನ್ನು ದಯಪಾಲಿಸಲಿ.

ಹಝ್ರತ್ ಮಸೀಹ್ ಮೌಊದ್[ಅ] ಹೇಳಿದ್ದಾರೆ: "ಅತಿಥಿಯ ಭಾವನೆಗಳು ಬಹಳ ನಾಜೂಕಾಗಿರುತ್ತವೆ, ಹಾಗಾಗಿ ಯಾವಾಗಲೂ ಅವರ ಬಗ್ಗೆ ಕಾಳಜಿ ವಹಿಸಬೇಕು."

ಹಾಗಾಗಿ, ನಾವು ಎಲ್ಲ ರೀತಿಯಲ್ಲೂ ಅತಿಥಿಗಳ ಸೇವೆ ಮಾಡಬೇಕು ಎಂಬುದನ್ನು ಮರೆಯಬಾರದು. ನಾವು ನಮ್ಮನ್ನು ಸಮರ್ಪಿಸಿಕೊಂಡಿದ್ದರೆ, ಅಲ್ಲಾಹನ ಸಂಪ್ರೀತಿಯನ್ನು ಪಡೆಯಲು ಈ ಕರ್ತವ್ಯವನ್ನು ಪೂರೈಸಲು ನಮ್ಮಿಂದಾದಷ್ಟು ಪ್ರಯತ್ನವನ್ನು ಸಹ ಮಾಡಬೇಕು ಮತ್ತು ಸಾಧ್ಯವಾದಷ್ಟೂ ನಾವು ಮುಹಮ್ಮದೀ ಮಸೀಹ್‌ರ ಅತಿಥಿಗಳ ಸೇವೆಯ ಹಕ್ಕನ್ನು ಪೂರೈಸಬೇಕು.

ಅತಿಥಿ ಸತ್ಕಾರ ಮಾಡುವ ನಮ್ಮ ಕಾರ್ಯಕರ್ತರು ಅಥವಾ ನಮ್ಮ ಜಲ್ಸದ ಏರ್ಪಾಡುಗಳು ಹೇಗಿರುತ್ತವೆಯೆಂದರೆ, ಹೊರಗಿನಿಂದ ಬರುವಂತಹ, ಅಹ್ಮದಿಯರಲ್ಲದ ಮತ್ತು ಮುಸ್ಲಿಮೇತರ ಅತಿಥಿಗಳು ಸಹ ಈ ಏರ್ಪಾಡುಗಳನ್ನು ಕಂಡು ಬಹಳ ಪ್ರಭಾವಿತರಾಗುತ್ತಾರೆ. ಇಲ್ಲಿ ನಡೆಸಲಾಗುವ ಕಾರ್ಯಕರ್ತರ ಸಂಪೂರ್ಣ ವ್ಯವಸ್ಥೆಯನ್ನು ನೋಡಿ ಅವರು ಆಶ್ಚರ್ಯಚಕಿತರಾಗುತ್ತಾರೆ. ಇದರಲ್ಲಿ ಸಂಚಾರ ವ್ಯವಸ್ಥೆಯೂ ಇದೆ, ಊಟದ ವ್ಯವಸ್ಥೆ, ಸ್ವಚ್ಛತಾ ವ್ಯವಸ್ಥೆ, ಅಡುಗೆ ವ್ಯವಸ್ಥೆ, ನೀರು ಸರಬರಾಜು ವ್ಯವಸ್ಥೆಯೂ ಇದೆ, ಒಟ್ಟಿನಲ್ಲಿ ಅಸಂಖ್ಯಾತ ವಿಭಾಗಗಳಿವೆ, ಅದರಲ್ಲಿ ಅಲ್ಲಾಹನ ಕೃಪೆಯಿಂದ ಜಮಾಅತ್‌ನ ಸ್ವಯಂಸೇವಕರು ಕಾರ್ಯನಿರ್ವಹಿಸುತ್ತಿದ್ದಾರೆ. ಇತರರು ಇದನ್ನು ನೋಡಿ ಬಹಳ ಪ್ರಭಾವಿತರಾಗುತ್ತಾರೆ. ಇದು ಸಹ ತಬ್ಲೀಗಿನ ಒಂದು ಮಾರ್ಗವಾಗಿದೆ.

ಹಝ್ರತ್ ಮಸೀಹ್ ಮೌಊದ್[ಅ] ಅತಿಥಿಗಳ ಸೇವೆಯನ್ನು ಎಷ್ಟರಮಟ್ಟಿಗೆ ಮಾಡುತ್ತಿದ್ದರು ಅಥವಾ ಅವರ ಬಗ್ಗೆ ಎಷ್ಟು ಕಾಳಜಿ ವಹಿಸುವಂತೆ ಮಾಡುತ್ತಿದ್ದರು ಎಂಬುದರ ಬಗ್ಗೆ ವರದಿಗಳಿವೆ. ಹಝ್ರತ್ ಮಸೀಹ್ ಮೌಊದ್[ಅ] ಅತಿಥಿಗಳ ಬಗ್ಗೆ ಬಹಳ ಕಾಳಜಿ ವಹಿಸುತ್ತಿದ್ದರು. ಲಂಗರ್‌ನ ಅತಿಥಿಗಳ ಕಾಳಜಿ ವಹಿಸಲು ಹಝ್ರತ್ ಹಾಫಿಝ್ ಹಾಮಿದ್ ಅಲಿ ಸಾಹಿಬ್[ರ]ರನ್ನು ನೇಮಿಸಲಾಗಿತ್ತು, ಅವರೊಡನೆ ಹಝ್ರತ್ ಮಸೀಹ್ ಮೌಊದ್[ಅ] ಹೀಗೆ ಹೇಳಿದ್ದರು: "ಈ ಅತಿಥಿಗಳ ಬಗ್ಗೆ ವಿಶೇಷ ಕಾಳಜಿ ವಹಿಸಬೇಕು. ಸಾಮಾನ್ಯ ದಿನಗಳಲ್ಲಿ ಅರ್ಹವಾದ ರೀತಿಯಲ್ಲಿ ಅತಿಥಿಗಳ ಸೇವೆಯನ್ನು ಸಹ ಮಾಡಬೇಕು."

ಹಝ್ರತ್ ಮಸೀಹ್ ಮೌಊದ್[ಅ]ರ ಅತಿಥಿ ಸತ್ಕಾರಕ್ಕೆ ಸಂಬಂಧಿಸಿದಂತೆ ಅನೇಕ ಘಟನೆಗಳು ಇವೆ, ಇವುಗಳು ಅವರ ವಾತ್ಸಲ್ಯ, ಜವಾಬ್ದಾರಿಯ ಅರಿವು ಮತ್ತು ಅತಿಥಿಗಳೊಂದಿಗಿನ ಉತ್ತಮ ನಡವಳಿಕೆಯ ಅತ್ಯುತ್ತಮ ಮಾದರಿಯನ್ನು ತೋರಿಸಿ ಕೊಡುತ್ತವೆ. ಹಝ್ರತ್ ಡಾಕ್ಟರ್ ಹಶ್ಮತುಲ್ಲಾಹ್ ಸಾಹಿಬ್[ರ] ವಿವರಿಸುತ್ತಾರೆ: ಜಲ್ಸದ ಸಂದರ್ಭದಲ್ಲಿ ಜಮಾಅತಿನ ಮೀಟಿಂಗಿನಲ್ಲಿ ಪಾಲ್ಗೊಂಡ ಕಾರಣ ಅವರಿಗೆ ಊಟ ಮಾಡಲು ಸಾಧ್ಯವಾಗಲಿಲ್ಲ. ಮೀಟಿಂಗ್ ಮುಗಿದ ನಂತರ ತಡರಾತ್ರಿ ಅವರು ಲಂಗರ್‌ಖಾನೆಯನ್ನು ತಲುಪಿದಾಗ ಊಟ ಮುಗಿದು ಹೋಗಿತ್ತು. ಒಂದು ರೊಟ್ಟಿಯ ತುಂಡು ಮಾತ್ರ ಸಿಕ್ಕಿತು, ಅದನ್ನು ಅವರು ತಿನ್ನಲಾರಂಭಿಸಿದರು. ಅಷ್ಟರಲ್ಲಿ ಬಾಗಿಲು ತಟ್ಟಿದ ಸದ್ದು ಕೇಳಿಸಿತು ಮತ್ತು ಹೀಗೆ ಹೇಳಿ ಕರೆಯಲಾಯಿತು: "ಅತಿಥಿಗಳಲ್ಲಿ ಯಾರಾದರೂ ಹಸಿವಿನಿಂದ ಇದ್ದರೆ ಲಂಗರ್‌ಖಾನೆಗೆ ಬಂದು ಊಟ ಮಾಡಿರಿ". ಮರುದಿನ ಹಝ್ರತ್ ಮಸೀಹ್ ಮೌಊದ್[ಅ] ಹೀಗೆ ಹೇಳಿದರು: "ರಾತ್ರಿ ಅಲ್ಲಾಹನು ದಿವ್ಯವಾಣಿ ಮೂಲಕ ಹೀಗೆ ತಿಳಿಸಿದನು: **'ಯಾ ಅಯ್ಯುಹನ್ನಬಿಯ್ಯು ಅತ್‌ಇಮುಲ್ ಜಾಇಅ ವಲ್‌ಮುಅ್‌ತರ'** ಅಂದರೆ, ಹೇ ಪ್ರವಾದಿ, ಹಸಿದವನಿಗೆ ಮತ್ತು ನಿರ್ಗತಿಕನಿಗೆ ಊಟ ನೀಡಿರಿ."

ಈ ಘಟನೆಯಿಂದ ತಿಳಿಯುವುದೇನೆಂದರೆ, ಅಲ್ಲಾಹನು ತನ್ನ ಅತಿಥಿಗಳ ಕಷ್ಟದ ಬಗ್ಗೆಯೂ ಸಹ ಕಾಳಜಿವಹಿಸುತ್ತಾನೆ. ಆದ್ದರಿಂದ ಜಲ್ಸದ ನಿರ್ವಾಹಕರು ಯಾವಾಗಲೂ ಈ ವಿಷಯದ ಕುರಿತು ನಿಗಾ ವಹಿಸಬೇಕು. ಪ್ರಯಾಣದ ಕಾರಣದಿಂದ ತಡವಾಗಿ ತಲುಪುವ ಅಥವಾ ಯಾವುದೇ ಅನಿವಾರ್ಯತೆಯಿಂದಾಗಿ ಸಮಯಕ್ಕೆ ಊಟ ಮಾಡಲಾಗದ ಅತಿಥಿಗಳಿಗೂ ಸೂಕ್ತವಾದ ಮತ್ತು ತಾಜಾ ಊಟದ ವ್ಯವಸ್ಥೆ ಲಭ್ಯವಿರಬೇಕು.

ಹಝ್ರತ್ ಮಸೀಹ್ ಮೌಊದ್[ಅ] ಹೀಗೂ ಹೇಳಿದ್ದಾರೆ: "ನನ್ನ ಅನುಯಾಯಿಗಳು ಬಡವರಾಗಿರಲಿ ಅಥವಾ ಶ್ರೀಮಂತರಾಗಿರಲಿ, ಎಲ್ಲರೂ ನನ್ನ ದೃಷ್ಟಿಯಲ್ಲಿ ಸಮಾನರಾಗಿದ್ದಾರೆ. ಆದ್ದರಿಂದ ಮಾಂಸ ಮತ್ತು ಪಲಾವ್ ಪಾಕ ಮಾಡಲಾಗಿದ್ದರೆ ಅದು ಎಲ್ಲರಿಗೂ ಇರಬೇಕು, ಬೇಳೆಸಾರು ಇದ್ದರೆ ಅದನ್ನು ಸಹ ಎಲ್ಲರಿಗೂ ಸಮಾನವಾಗಿ ನೀಡಬೇಕು." ಈ ಬೋಧನೆಯಿಂದ ಸಮಾನತೆ, ನ್ಯಾಯ ಮತ್ತು ಸಹೋದರತೆಯ ಅತ್ಯುನ್ನತ ಗುಣಮಟ್ಟ ಸ್ಥಾಪನೆಯಾಗುತ್ತದೆ.

(ಹುಝೂರ್ ಹೇಳಿದರು:) ಇವು ಹಝ್ರತ್ ಮಸೀಹ್ ಮೌಊದ್[ಅ]ರ ವಿಧಾನಗಳಾಗಿದ್ದವು. ಅವರ ಶೈಲಿಯಾಗಿದ್ದವು. ಉಪದೇಶ ನೀಡುವ ಅವರ ರೀತಿಯಾಗಿತ್ತು ಮತ್ತು ಅವರ ಅತಿಥಿ ಸತ್ಕಾರದ ವಿಧಾನಗಳಾಗಿದ್ದವು.

ಏನೇ ಆಗಲಿ, ಅತಿಥಿಗಳು ಸಹ ಈ ವಿಷಯದ ಬಗ್ಗೆ ಕಾಳಜಿ ವಹಿಸಬೇಕು; ಲಂಗರ್‌ನ ವ್ಯವಸ್ಥೆಯ ಅಡಿಯಲ್ಲಿ ಯಾವ ಊಟ ತಯಾರಿದೆಯೋ, ಏನು ಸಿಗುತ್ತದೆಯೋ, ಅದನ್ನು ತಾಳ್ಮೆ ಮತ್ತು ಕೃತಜ್ಞತೆಯಿಂದ ತಿನ್ನಬೇಕು. ನೀವು ಇಲ್ಲಿಗೆ ಹಝ್ರತ್ ಮಸೀಹ್ ಮೌಊದ್(ಅ)ರ ಕರೆಗೆ ಓಗೊಟ್ಟು ಬಂದಿರುವಾಗ ಮತ್ತು ಇಲ್ಲಿಂದ ಆಧ್ಯಾತ್ಮಿಕ ಭೋಜನವನ್ನು ಪಡೆಯಬೇಕು ಎಂಬ ಉದ್ದೇಶದಿಂದ ಬಂದಿರುವಾಗ, ಆಧ್ಯಾತ್ಮಿಕ ಭೋಜನದ ಕಡೆಗೆ ಹೆಚ್ಚು ಗಮನವಿರಬೇಕು, ಊಟದಲ್ಲಿ ಏನಾದರೂ ಹೆಚ್ಚು ಕಡಿಮೆಯಾದರೂ ಸಹಿಸಿಕೊಳ್ಳಬೇಕು ಮತ್ತು ಯಾವುದೇ ಬೇಡಿಕೆಯನ್ನು ಮುಂದಿಡಬಾರದು. ಆದ್ದರಿಂದ ಅತಿಥಿಗಳು ಸಹ, ಈ ಮೂರು ದಿನಗಳಲ್ಲಿ ಏನು ಸಿಗುತ್ತದೆಯೋ ಅದನ್ನು ತಾಳ್ಮೆ ಮತ್ತು ಕೃತಜ್ಞತೆಯಿಂದ ಸ್ವೀಕರಿಸಬೇಕು. 'ಇದು ನಮಗೆ ಇಷ್ಟವಿಲ್ಲ' ಅಥವಾ 'ನಾವು ಇದನ್ನು ತಿನ್ನುವುದಿಲ್ಲ' ಎಂಬಂತಹ ಯಾವುದೇ ಭಾವನೆಯನ್ನು ವ್ಯಕ್ತಪಡಿಸಬಾರದು ಎಂಬುದನ್ನು ಗಮನದಲ್ಲಿಟ್ಟುಕೊಳ್ಳಬೇಕು.

(ಅತಿಥಿಗಳಿಗೆ ನೀಡಲಾಗುವ ಊಟದ ಗುಣಮಟ್ಟದ ಕುರಿತಾದ ಮುಂಜಾಗ್ರತೆಯ ಸಂಬಂಧಿಸಿದ ಹಝ್ರತ್ ಮಸೀಹ್ ಮೌಊದ್(ಅ)ರ ವರದಿಯೊಂದನ್ನು ಪ್ರಸ್ತುತಪಡಿಸಿದ ನಂತರ ಹುಝೂರ್ ಹೀಗೆ ಹೇಳಿದರು:) ಅಡುಗೆ ಮಾಡುವ ಕಾರ್ಯಕರ್ತರು ಕೂಡ ಎಚ್ಚರಿಕೆ ವಹಿಸಬೇಕು. ಈ ದಿನಗಳಲ್ಲಿ ವಿಶೇಷವಾಗಿ ಈಗ ಬೇಸಿಗೆಯಾಗಿರುವುದರಿಂದ, ಊಟವು ಸರಿಯಾಗಿ ಸಂರಕ್ಷಿತವಾಗಿರುವಂತೆ ಮತ್ತು ಬಹಳ ಹೊತ್ತು ಇಡದಂತೆ ಊಟದ ವ್ಯವಸ್ಥೆ ಇರಬೇಕು. ವಿಶೇಷವಾಗಿ ಬೇಳೆಸಾರು ಇತ್ಯಾದಿಗಳು ಬೇಗನೆ ಹಾಳಾಗುತ್ತವೆ, ಅವುಗಳನ್ನು ಬಹಳ ಹೊತ್ತು ಇಟ್ಟು ಅತಿಥಿಗಳಿಗೆ ನೀಡಬಾರದು. ಈ ಬಗ್ಗೆ ಕಾಳಜಿ ವಹಿಸಿ ಮೊದಲು ಊಟವನ್ನು ಸರಿಯಾಗಿ ಪರಿಶೀಲಿಸಿಕೊಳ್ಳಬೇಕು.

ಯಾವ ಸದುದ್ದೇಶಕ್ಕಾಗಿ ನೀವು ಬಂದಿದ್ದೀರೋ, ಅದನ್ನೇ ನೀವು ಪೂರೈಸಬೇಕು ಎಂಬುದನ್ನು ಅತಿಥಿಗಳು ಯಾವಾಗಲೂ ನೆನಪಿನಲ್ಲಿಡಬೇಕು. ಇದಿಲ್ಲದಿದ್ದರೆ ಯಾವುದೇ ಪ್ರಯೋಜನವಿಲ್ಲ. ಇಲ್ಲಿ ನಮಾಝಿನ ನಿಯಮಿತ ವ್ಯವಸ್ಥೆಯಂತೂ ಇದೆ, ಆದರೆ ದೀರ್ಘಕಾಲ ತಂಗುವವರು, ಜಮಾಅತ್‌ನ ವಸತಿಗೃಹಗಳಲ್ಲಿ ಇರುವವರು, ಜಲ್ಸದ ನಂತರವೂ ನಮಾಝ್‌ಗಳ ಕಡೆಗೆ ಗಮನ ಹರಿಸಬೇಕು ಮತ್ತು ಜಮಾಅತ್‌ನೊಂದಿಗೆ ನಮಾಝ್ ನಿರ್ವಹಿಸಲು ಪ್ರಯತ್ನಿಸಬೇಕು.

ಇಲ್ಲಿ ಈ ಮೂರು ದಿನಗಳಲ್ಲಿ ತಹಜ್ಜುದ್ ನಮಾಝ್ ಕೂಡ ನಡೆಯುತ್ತದೆ. ತಹಜ್ಜುದ್ ಸಮಯಕ್ಕೆ ಎಬ್ಬಿಸಲಾಗುವಾಗ ಇಲ್ಲಿ ಟೆಂಟ್‌ಗಳಲ್ಲಿ ಅಥವಾ ಮಾರ್ಕಿಗಳಲ್ಲಿ ತಂಗಿರುವವರೆಲ್ಲರೂ ಏಳಬೇಕು. ಈ ಕಡೆ ವಿಶೇಷ ಗಮನಹರಿಸಬೇಕು. ಐದು ಹೊತ್ತಿನ ನಮಾಝನ್ನು ನಿಯಮಿತವಾಗಿ ನಿರ್ವಹಿಸಲೇ ಬೇಕು. ಆದರೆ ತಹಜ್ಜುದ್ ನಮಾಝನ್ನು ನಿಯತವಾಗಿ ನಿರ್ವಹಿಸಲು ವಿಶೇಷವಾಗಿ ಪ್ರಯತ್ನಿಸಬೇಕು.

(ತದನಂತರ ಹುಝೂರ್ ಒಣ ಹವಾಮಾನದ ಹಿನ್ನೆಲೆಯಲ್ಲಿ ವೈಯಕ್ತಿಕ ಅಥವಾ ಸಾಮೂಹಿಕ ವಸತಿಗೃಹಗಳಲ್ಲಿ ಯಾವುದೇ ರೀತಿಯ ಬೆಂಕಿಯನ್ನು ಉರಿಸದಂತೆ ತಾಕೀತು ಮಾಡುತ್ತಾ ಹೀಗೆ ಹೇಳಿದರು:) ಪ್ರತಿಯೊಂದು ಸ್ಥಳದಲ್ಲೂ ಕುಳಿತುಕೊಳ್ಳುವಾಗ ಯಾವುದೇ ರೀತಿಯಲ್ಲಿ ಬೆಂಕಿ ಹೊತ್ತಿಸುವುದರಿಂದ ಬಿಟ್ಟುನಿಲ್ಲಬೇಕು ಮತ್ತು ಎಚ್ಚರಿಕೆ ವಹಿಸಬೇಕು ಅದರಿಂದ ಏನಾದರೂ ಅಪಘಾತವೂ ಸಂಭವಿಸಬಹುದು.

(ಸ್ವಚ್ಛತೆಯ ಮಹತ್ವವನ್ನು ಒತ್ತಿ ಹೇಳುತ್ತಾ ಹುಝೂರ್ ಹೇಳಿದರು:) ಆಡಳಿತ ವ್ಯವಸ್ಥೆಯೂ ಸ್ನಾನಗೃಹಗಳು, ಶೌಚಾಲಯಗಳು ಮತ್ತು ಇತರ ಸ್ಥಳಗಳ ಸ್ವಚ್ಛತೆಯ ವ್ಯವಸ್ಥೆ ಮಾಡಿದ್ದರೂ, ಪ್ರತಿಯೊಬ್ಬ ಅತಿಥಿ ಮತ್ತು ಪ್ರತಿಯೊಬ್ಬ ಕಾರ್ಯಕರ್ತ ಬಳಕೆಯ ನಂತರ ಸ್ವಚ್ಛತೆಯ ಬಗ್ಗೆ ಕಾಳಜಿ ವಹಿಸುವುದು ಅವರ ಜವಾಬ್ದಾರಿಯಾಗಿದೆ. ಹದೀಸ್‌ನ ಪ್ರಕಾರ ಸ್ವಚ್ಛತೆಯು ಸತ್ಯವಿಶ್ವಾಸದ ಒಂದು ಭಾಗವಾಗಿದೆ. ಈಮಾನನ್ನು ಹೆಚ್ಚಿಸಲು ಜಲ್ಸಗೆ ಬಂದಿರುವಾಗ, ಸ್ವಚ್ಛತೆಯನ್ನು ಸಹ ಆರಾಧನೆ ಎಂದು ಭಾವಿಸಿ ಅದರ ಕಡೆಗೆ ವಿಶೇಷ ಕಾಳಜಿ ವಹಿಸಬೇಕು. ಈ ದಿನಗಳಲ್ಲಿ ಪ್ರತಿಯೊಬ್ಬರೂ ತಮ್ಮನ್ನು ಸ್ವತಃ ಕಾರ್ಯಕರ್ತರೆಂದು ಭಾವಿಸಬೇಕು ಮತ್ತು ಅಗತ್ಯವಿರುವಲ್ಲಿ ಸಹಕರಿಸಬೇಕು.

(ಇದರೊಂದಿಗೆ ಹುಝೂರ್ ಸತ್ಯವಿಶ್ವಾಸದ ಮಟ್ಟವನ್ನು ಹೆಚ್ಚಿಸುವ ಕಡೆಗೆ ವಿಶೇಷ ಗಮನ ಸೆಳೆಯುತ್ತಾ ಹೀಗೆ ಹೇಳಿದರು:) ಬಿಡುವಿನ ವೇಳೆಯಲ್ಲಿ ದೇವಸ್ಮರಣೆ, ದುರೂದ್ ಶರೀಫ್, ಇಸ್ತಿಗ್ಫಾರ್ ಮತ್ತು ದುಆಗಳಲ್ಲಿ ಮಗ್ನರಾಗಿರಿ. ಅನಗತ್ಯ ಮಾತುಕತೆ, ವ್ಯರ್ಥ ಚಟುವಟಿಕೆಗಳು ಮತ್ತು ನಿರರ್ಥಕ ಮಾತುಗಳಿಂದ ದೂರವಿರಿ; ಧಾರ್ಮಿಕ ಚರ್ಚೆಗಳು ಮತ್ತು ದೇವಸ್ಮರಣೆಯನ್ನು ನಿಮ್ಮ ಸಭೆಗಳ ಭಾಗವನ್ನಾಗಿ ಮಾಡಿಕೊಳ್ಳಿ. ಅದೇ ರೀತಿ ಜಲ್ಸದಲ್ಲಿ ಆಯೋಜಿಸಲಾಗುವ ವಿವಿಧ ಪ್ರದರ್ಶನಗಳಿಂದಲೂ ಖಂಡಿತವಾಗಿಯೂ ಪ್ರಯೋಜನ ಪಡೆಯಿರಿ. ಅವುಗಳನ್ನು ಕೇವಲ ನೋಡುವ ವಸ್ತುವೆಂದು ಭಾವಿಸದೆ, ಆಸಕ್ತಿ ಮತ್ತು ಗಮನದಿಂದ ವೀಕ್ಷಿಸಬೇಕು; ಏಕೆಂದರೆ ಇವುಗಳಿಂದ ಶೈಕ್ಷಣಿಕ, ಐತಿಹಾಸಿಕ ಮತ್ತು ಧಾರ್ಮಿಕ ಮಾಹಿತಿಗಳು ಲಭ್ಯವಾಗುತ್ತವೆ ಮತ್ತು ಮನುಷ್ಯನ ಈಮಾನ್ ಹಾಗೂ ಅರಿವು ಹೆಚ್ಚಾಗುತ್ತದೆ.

(ಕೊನೆಯಲ್ಲಿ ಹುಝೂರ್ ಹೀಗೆ ದುಆ ಮಾಡಿದರು:) ಪಾಲ್ಗೊಳ್ಳುವ ಪ್ರತಿಯೊಬ್ಬರಿಗೂ ಜಲ್ಸ ಸಾಲಾನದ ಧಾರ್ಮಿಕ, ಆಧ್ಯಾತ್ಮಿಕ ಮತ್ತು ಶೈಕ್ಷಣಿಕ ಅನುಗ್ರಹಗಳಿಂದ ಅಲ್ಲಾಹನು ಸಂಪೂರ್ಣ ಪಾಲನ್ನು ದಯಪಾಲಿಸಲಿ, ಈ ಅನುಗ್ರಹಗಳು

ಜೀವನದಲ್ಲಿ ಸದಾ ನೆಲೆಸಿರಲಿ ಮತ್ತು ಅವರ ಮುಂದಿನ ಪೀಳಿಗೆಗೂ ವರ್ಗಾವಣೆಯಾಗಲಿ. ಅಲ್ಲಾಹನು ಅವರನ್ನು ಹಝ್ರತ್ ಮಸೀಹ್ ಮೌಊದ್(ಅ)ರ ಪ್ರವಾದಿತ್ವದ ಉದ್ದೇಶವನ್ನು ಪೂರೈಸುವವರನ್ನಾಗಿ ಮಾಡಲಿ... ಜಲ್ಸದ ಉದ್ಘಾಟನಾ ಭಾಷಣ ಮತ್ತು ಇತರ ಎಲ್ಲ ಭಾಷಣಗಳನ್ನು ಸಂಪೂರ್ಣ ಗಮನ, ಚಿಂತನೆ ಮತ್ತು ನಿಷ್ಠೆಯಿಂದ ಆಲಿಸಿರಿ ಮತ್ತು ಅವುಗಳಲ್ಲಿ ನೀಡಲಾಗುವ ಉಪದೇಶಗಳನ್ನು ಪಾಲಿಸಲು ಪ್ರಯತ್ನಿಸಿರಿ. ಅಲ್ಲಾಹನು ಎಲ್ಲರಿಗೂ ಇದರ ಸೌಭಾಗ್ಯವನ್ನು ಕರುಣಿಸಲಿ. ಆಮೀನ್.

————————————*****————————————

اَلْحَمْدُلِلّٰهِ نَحْمَدُهٗ وَنَسْتَعِيْنُهٗ وَنَسْتَغْفِرُهٗ وَنُؤْمِنُ بِهٖ وَنَتَوَكَّلُ عَلَيْهِ وَنَعُوْذُ بِاللّٰهِ
مِنْ شُرُوْرِ اَنْفُسِنَا وَمِنْ سَيِّئَاتِ اَعْمَالِنَا مَنْ يَّهْدِهِ اللّٰهُ فَلَا مُضِلَّ لَهٗ وَمَنْ يُّضْلِلْهُ
فَلَاهَادِىَ لَهٗ ؕ وَنَشْهَدُ اَنْ لَّآ اِلٰهَ اِلَّا اللّٰهُ وَنَشْهَدُاَنَّ مُحَمَّدًا عَبْدُهٗ وَرَسُوْلُهٗ
عِبَادَ اللّٰهِ رَحِمَكُمُ اللّٰهُ اِنَّ اللّٰهَ يَأْمُرُ بِالْعَدْلِ وَالْاِحْسَانِ وَاِيْتَاءِ ذِى الْقُرْبٰى
وَيَنْهٰى عَنِ الْفَحْشَآءِ وَالْمُنْكَرِ وَالْبَغْىِ يَعِظُكُمْ لَعَلَّكُمْ تَذَكَّرُوْنَ ٥ اُذْكُرُوا اللّٰهَ
يَذْكُرْكُمْ وَادْعُوْهُ يَسْتَجِبْ لَكُمْ وَلَذِكْرُ اللّٰهِ اَكْبَرُ.

*Friday Sermon delivered by Hadrath Khaleefatul Masih Al Khamis*(*atba*)
At, ***'Masjid Mubarak',*** *Islamabad, Tilford,* U.K. On 24-07-2026

**Summarized by** *Majlis Ansarullah Bharat*

***Kannada Translation:*** Moulavi Inamullah for Kannada Desk, Qadian

***Reviewed by:*** M.P Ibrahim | ***Layout:*** Basheer K.P. Manjeshwar

***Published By:*** Kannada Isha'at Team for Nazarath Nashr-O-Isha'ath, Qadian

***Email:*** *khutuba.kannada@gmail.com*

**You can find all the Sermons archived at**: www.alislam.org/friday-sermon